ಅಪಾಯ ಮಾಡಲಿಕ್ಕಿಲ್ಲ ಅಂತಲೂ ಇನ್ನೊಮ್ಮೆ ಯೋಚಿಸಿದಳು.

ಶಂಕರ ಬ್ಯಾಂಕಿನಿಂದ ಬರುವ ಪೂರ್ವದಲ್ಲಿ ಯಾರೇ ಬಂದು ಬಾಗಿಲು ಬಡಿದರೂ, ಕಿಟಕಿಯಲ್ಲಿ ವೀಕ್ಷಿಸದೇ ಬಾಗಿಲು ತೆರೆಯಬಾರದೆಂದುಕೊಂಡಳು. ಇನ್ನೇನಾದರೂ ಹೆಚ್ಚುಕಮ್ಮಿಯಾದರೆ, 100 ನಂಬರ್ ಒತ್ತಿ ಪೊಲೀಸ್‌ಗೆ ಫೋನ್ ಮಾಡಿದರಾಯಿತು ಅಂತೆಲ್ಲ ತನ್ನೊಳಗೇ ತಾನು ಧೈರ್ಯ ತುಂಬಿಕೊಂಡಳು. ಆದರೂ ಮನಸ್ಸಿನ ತಾಕಲಾಟ ಹದ್ದುಬಸ್ತಿಗೆ ಬರುತ್ತಿಲ್ಲ. ಎಂಥದೋ ದುಗುಡ, ಎಲ್ಲ ಬೇಗ ಮುಗಿದು ಹೋದರೆ ಸಾಕು ಎನ್ನಿಸುವ ಅವಸರ. 'ಅಥವಾ ಇಂವ ನಾ ಶಾಲೀ ಕಾಲೇಜ್ ಕಲಿಯೂಮುಂದ ಕ್ಲಾಸ್‌ಮೇಟ್ ಗೇಸ್‌ಮೇಟ್ ಆಗಿದ್ನೇನ ಮತ್ತ?' ಅನ್ನುವುದರತ್ತಲೇ ಚಿತ್ತ.

ಸ್ನೇಹಹಸ್ತ ಚಾಚಿದ ಇತ್ತೀಚಿನ ಆರು ತಿಂಗಳಲ್ಲಿ ಒಮ್ಮೆಯೂ ಹೀಗೆ 'ಮನೆಗೆ ಬರುವೆ, ವಿಳಾಸ ಕೊಡಿ' ಅಂತ ಕೇಳದಿದ್ದವ ಈವತ್ತ ಯಾಕ್ ಕೇಳಿದ್ನೋ? ಛೇ, ಶಂಕರ ಏನಾರ ತಪ್ಪು ತಿಳಕೊಂಡರ?' ಎಂಬೆಲ್ಲ ಅನಗತ್ಯ ವಿಚಾರಗಳು ಸರಸ್ವತಿಯನ್ನು ಮುತ್ತಿ ಎಡಬಿಡದೇ ಹಿಂಸಿಸತೊಡಗಿದ್ದವು. ಅಥವಾ ಒಂದೇ ಕ್ಷಣದಲ್ಲಿ ಎಲ್ಲ ಸುಳ್ಳಾಗಿ ಈತ ಯಾವುದಾದರೂ ಖಾಸಗಿ ಕಂಪನೀ ವಿಮೆಗಿಮೆ ಪಾಲಿಸಿ ಮಾಡ್ಸೋ ಏಜೆಂಟನೇ? ಬೆಡ್ಶಿಟ್ ಗಿಡ್ಶಿಟ್ ಮಾರಾಕ ಬರೋ ವ್ಯಕ್ತೀನೋ ಎಂಬೆಲ್ಲ ತಳಮಳಗಳು ಹೊಟ್ಟೆಯಲ್ಲೇ ಹುಟ್ಟಿಕೊಂಡು ಚಡಪಡಿಸಲಾರಂಭಿಸಿದ್ದವು.

★★★

ಎರಡು ವರ್ಷಗಳ ಕೆಳಗೆ ಒಮ್ಮೆ ಹೀಗೇ ಅಂಥದೇ ಇಕ್ಕಟ್ಟಿಗೆ ಸಿಲುಕಿಕೊಂಡಿದ್ದಳು ಸರಸ್ವತಿ. 'ಹುಬ್ಬಳ್ಳಿ ಮಂದಿ' ಗ್ರೂಪ್ ಸೇರಿದ ಹೊಸದರಲ್ಲಿ ನಡೆದ ಪ್ರಕರಣ ಅದು. ಆಗಿನ್ನೂ ಈ ಸತ್ಯ ಹರಿಶ್ಚಂದ್ರ ಬೆಳಕು ಕಂಡಿರಲಿಲ್ಲ. ಆಕಾಶ್ ಮನೋಹರ ಎಂಬ ಹೆಸರಿಟ್ಟುಕೊಂಡು ಸ್ಟೈಲಿಶ್ ಆಗಿರುವ ಕಾಲೇಜು ಯುವಕನಂತೆ ಕಾಣುವ ಅವನ ಪ್ರೊಫೈಲ್ ಪಿಕ್ ನೋಡಿ, ಮೋಸ ಹೋಗಿ ಸರಸ್ವತಿ ಅವನ ಫ್ರೆಂಡ್ ರಿಕ್ವೆಸ್ಟ್ ಕನ್ಫರ್ಮ್ ಮಾಡಿದ್ದಳು. ಇವಳು ಅಪ್ ಲೋಡ್ ಮಾಡುತ್ತಿದ್ದ, ತುಟಿಗೆ ಗಾಢ ಬಣ್ಣದ ಲಿಪ್ ಸ್ಟಿಕ್, ಕಣ್ಣಿಗೆ ದಟ್ಟ ಕಾಜಲ್ ಹಣೆಯಲ್ಲಿ ಒಂದೆರಡು ಮುಂಗುರುಳು ಇಳಿಬಿಟ್ಟುಕೊಂಡ ಸೆಲ್ಫಿಗಳಿಗೆ ಆತ ಆಗಾಗ, ವಾವ್! ಸೂಪರ್! ವೆರಿ ನೈಸ್! ಎಂದು ಕಮೆಂಟು ಮಾಡುತ್ತ ಪರಿಚಯವಾದವ.

ಆ ನಡುವೆ ಅವನು, ಸರಸ್ವತಿ ಹಾಕಿದ ಮನೆ ಮುಂದಿನ ಬಣ್ಣದ ರಂಗೋಲಿಯ ಒಂದು ಫೋಟೊಕ್ಕೆ ಲೈಕ್ ಮಾಡಿ, 'ನಾನು ನಿಮ್ಮ ಅಭಿಮಾನಿ, ನನಗೆ ನಿಮ್ಮ ಸಿಂಪ್ಲಿಸಿಟಿ ಇಷ್ಟವಾಗುತ್ತದೆ' ಎಂದು ಇನ್‌ಬಾಕ್ಸಿನಲ್ಲಿ ಕಮೆಂಟು ಮಾಡಿ ಇವಳ ತಲೆಯನ್ನು ಇನ್ನಷ್ಟು ಕೆಡಿಸಿಬಿಟ್ಟಿದ್ದ. ಅವನ ಪ್ರೊಫೈಲನ್ನು ತೆಗೆದು ಅವನ ಆಳಗಲ ಅಳೆದ ನಂತರ ಸರಸ್ವತಿಗೆ ಸಿಕ್ಕ ಮಾಹಿತಿಯೆಂದರೆ, ಆಕಾಶ್ ಮನೋಹರ್ ಮೂವತ್ತೈದು ವರ್ಷ ದಾಟಿದವ. ಗೋಕುಲ ರಸ್ತೆಯ ನೆಹರು ನಗರದ ವಾಟರ್ ಟ್ಯಾಂಕಿನ ಹತ್ತಿರ ಮನೆ ಇರುವವ. ಅಲ್ಲಿ ಅವನ ಹೆಂಡತಿ ಜೊತೆ ಎರಡು ಮಕ್ಕಳು ಹಾಗೂ ಅವರ ಹುಟ್ಟುಹಬ್ಬದ ಫೋಟೊಗಳು ಕೂಡ ಸಿಕ್ಕವು. ಮತ್ತು ಸ್ವಂತ ಉದ್ಯೋಗ ಎಂದು ಬರೆದುಕೊಂಡಿದ್ದ. ಹೀಗಿರುತ್ತಿರಲಾಗಿ ಒಂದು ದಿನ ಆತ ಇದ್ದಕ್ಕಿದ್ದಂತೆ 'ನಿಮ್ಮನ್ನು ಒಮ್ಮೆ ಭೇಟಿಯಾಗಬೇಕು.' 'ಮುಖತಃ ನೋಡಬೇಕು.' 'ಈ ನಿಮ್ಮ ಬಡಪಾಯಿ ಅಭಿಮಾನಿಗೆ ನಿಮ್ಮ ಫೋನ್ ನಂಬರ್ ಮತ್ತು ಮನೆ ವಿಳಾಸ ಕೊಡಿ' ಎಂದೆಲ್ಲ ಇವಳ ಇನ್‌ಬಾಕ್ಸಿಗೆ ಸಂದೇಶ ರವಾನಿಸಿದ್ದ.